# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **1469 (1643)** |
| **ಮಾನ್ಯ ಸದಸ್ಯರ ಹೆಸರು** | **ಶ್ರೀ ಎನ್ ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | **19 /12/2025** |
| **ಉತ್ತರಿಸುವವರು** | **ಮಾನ್ಯ ಕಾರ್ಮಿಕ ಸಚಿವರು** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯಲ್ಲಿರುವ ಸಂಗ್ರಹವಾಗಿರುವ ಮೊತ್ತವೆಷ್ಟು; ಈ ಮೊತ್ತದಲ್ಲಿ ಬಳಕೆಯಾದ ಮೊತ್ತವೆಷ್ಟು; ಯಾವ ಉದ್ದೇಶಗಳಿಗೆ ಬಳಸಲಾಗಿದೆ; ಅದರ ಫಲಾನುಭವಿಗಳ ಸಂಖ್ಯೆ ಎಷ್ಟು; (2 ವರ್ಷಗಳ ವರ್ಷವಾರು ವಿವರ ನೀಡುವುದು) | ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಸುಂಕ ನಿಧಿಯಲ್ಲಿ ಸುಂಕ ಮತ್ತು ಬಡ್ಡಿ ಸಹಿತ ಇದುವರೆಗೂ ಒಟ್ಟು ರೂ. 18,105.35 ಕೋಟಿಗಳಷ್ಟು ಮೊತ್ತ ಸಂಗ್ರಹವಾಗಿರುತ್ತದೆ. ಈ ಮೊತ್ತದಲ್ಲಿ ಒಟ್ಟು ರೂ.9,919.69 ಕೋಟಿಗಳಷ್ಟು ಮೊತ್ತ ಖರ್ಚಾಗಿರುತ್ತದೆ.<br><br>ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996ರ ಕಲಂ 22ರ ಉದ್ದೇಶಗಳಿಗಾಗಿ ಹಣವನ್ನು ಉಪಯೋಗಿಸಲಾಗಿದೆ.<br><br>ಕಳೆದ 2 ವರ್ಷಗಳಲ್ಲಿ ಮಂಡಳಿಯಲ್ಲಿ ರೂಪಿಸಿರುವ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳಡಿ ಒಟ್ಟು 35.05 ಲಕ್ಷ ಫಲಾನುಭವಿಗಳಿಗೆ ಒಟ್ಟು ರೂ.2034.19 ಕೋಟಿಗಳಷ್ಟು ಮೊತ್ತದ ಸೌಲಭ್ಯವನ್ನು ಒದಗಿಸಲಾಗಿದೆ. ಅದರ ವರ್ಷಾವಾರು ವಿವರವನ್ನು **ಅನುಬಂಧ-1ರಲ್ಲಿ** ಒದಗಿಸಿದೆ. |
| ಆ) | ನೋಂದಾಯಿತರಾಗಿರುವ ಕಟ್ಟಡ ಕಾರ್ಮಿಕರ ಸಂಖ್ಯೆ ಎಷ್ಟು; ಕಳೆದ ಎರಡು ವರ್ಷದಲ್ಲಿ ಹೊಸದಾಗಿ ನೋಂದಾಯಿತರಾದ ಕಾರ್ಮಿಕರ ಸಂಖ್ಯೆ ಎಷ್ಟು; ಇವರಿಗೆ ಯಾವ ಯಾವ ಸೌಲಭ್ಯಗಳನ್ನು ನೀಡಲಾಗುತ್ತಿದೆ; (ಜಿಲ್ಲಾವಾರು ವಿವರ ನೀಡುವುದು) | ಮಂಡಳಿಯ ವತಿಯಿಂದ ಇದುವರೆಗೂ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ಮಾಡುವ 27.35 ಲಕ್ಷ ಕಾರ್ಮಿಕರು ನೋಂದಣಿಯಾಗಿ ಸದಸ್ಯತ್ವ ಚಾಲ್ತಿಯನ್ನು ಹೊಂದಿರುತ್ತಾರೆ. ಅದರ ಜಿಲ್ಲಾವಾರು ವಿವರಗಳನ್ನು **ಅನುಬಂಧ-02** ರಲ್ಲಿ ಒದಗಿಸಿದೆ.<br><br>ಕಳೆದ ಎರಡು ವರ್ಷದಲ್ಲಿ 6.12 ಲಕ್ಷ ಕಾರ್ಮಿಕರು ಹೊಸದಾಗಿ ನೋಂದಣಿಯಾಗಿರುತ್ತಾರೆ. ನೋಂದಣಿಯಾದ ಎಲ್ಲಾ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ದೊರೆಯುವ ಸೌಲಭ್ಯಗಳ ವಿವರಗಳನ್ನು **ಅನುಬಂಧ-03ರಲ್ಲಿ** ಒದಗಿಸಿದೆ. |

| | | |
|---|---|---|
| ಇ) | ಕಟ್ಟಡ ಕಾರ್ಮಿಕರ ಸುರಕ್ಷತೆಗೆ ಸರ್ಕಾರ ಕೈಗೊಂಡ ಕ್ರಮಗಳೇನು; ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯಿಂದ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಸುರಕ್ಷಾ ಉಪಕರಣಗಳನ್ನು ನೀಡಲಾಗಿದೆಯೇ; ಇಲ್ಲವಾದಲ್ಲಿ ಯಾವಾಗ ನೀಡಲಾಗುವುದು? | ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996ರಲ್ಲಿ ಸುರಕ್ಷತೆಗೆ ಸಂಬಂಧಿಸಿದಂತೆ ನಿಗದಿಪಡಿಸಿರುವ ಪ್ರಾವಧಾನ ಗಳನ್ನು ಕಾರ್ಮಿಕ ಇಲಾಖೆಯ ಅಧಿಕಾರಿಗಳು ಹಾಗೂ ಕಾರ್ಖಾನೆಗಳು ಮತ್ತು ಬಾಯ್ಲರ್ ಇಲಾಖೆಗಳ ಅಧಿಕಾರಿಗಳು ಅನುಷ್ಠಾನ ಮಾಡುತ್ತಿದ್ದಾರೆ.<br><br>ಮಂಡಳಿಯ ವತಿಯಿಂದ ಕಾರ್ಮಿಕರ ಸುರಕ್ಷತೆಯ ದೃಷ್ಟಿಯಿಂದ ವಿವಿಧ ಉಪಕರಣಗಳುಳ್ಳ 1.96 ಲಕ್ಷ ಸುರಕ್ಷತಾ ಕಿಟ್‌ಗಳನ್ನು ಅರ್ಹ ಕಾರ್ಮಿಕರಿಗೆ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

**ಕಾಇ 502 ಎಲ್‌ಇಟಿ 2025**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**

## ಅನುಬಂಧ-1

## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎನ್ ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ: 1643 (1469)

| ಸೌಲಭ್ಯಗಳ ವಿವರ | 2023-24 | | 2024-25 | |
|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| ಶೈಕ್ಷಣಿಕ ಧನಸಹಾಯ | 4,19,602 | 1,00,85,12,400 | 4,48,840 | 2,65,52,68,350 |
| ಮದುವೆ ಧನಸಹಾಯ | 45,979 | 2,57,88,50,289 | 22,600 | 1,32,48,93,000 |
| ಅಂತ್ಯ ಸಂಸ್ಕಾರಕ್ಕೆ ವೆಚ್ಚ ಹಾಗೂ ಅನುಗ್ರಹ ರಾಶಿ | 7,514 | 54,46,30,450 | 4,623 | 34,59,37,000 |
| ಪ್ರಮುಖ ವೈದ್ಯಕೀಯ ಸಹಾಯಧನ | 5,249 | 24,10,37,458 | 2,565 | 12,42,33,297 |
| ಅಪಘಾತ ಪರಿಹಾರ | 601 | 14,13,96,736 | 474 | 10,84,29,000 |
| ನೊಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಮರಣ ಪರಿಹಾರ | 13 | 23,00,000 | 42 | 84,32,000 |
| ಹೆರಿಗೆ ಧನಸಹಾಯ | 4,385 | 18,66,57,150 | 3,208 | 13,55,60,000 |
| ವೈದ್ಯಕೀಯ ವೆಚ್ಚ | 371 | 18,29,927 | 573 | 45,03,495 |
| ಪಿಂಚಣಿ ಸೌಲಭ್ಯ | 974 | 26,45,36,500 | 9,765 | 19,97,67,500 |
| ದುರ್ಬಲತೆ ಪಿಂಚಣಿ | 77 | 1,93,55,000 | 226 | 94,63,671 |
| ಕುಟುಂಬ ಪಿಂಚಣಿ | 23 | 6,24,000 | 88 | 4,26,500 |
| ಶ್ರಮ ಸಾಮರ್ಥ್ಯ–ಟೂಲ್‌ಕಿಟ್ ಯೋಜನೆ/TOOL KITS | 1,31,140 | 4,06,39,619 | 81,229 | 92,77,72,070 |
| RPL Training/RPL KIT | 0 | 0 | 39,640 | 15,77,18,093 |
| ಬಿಎಂಟಿಸಿ ಬಸ್ ಪಾಸ್ | 1,35,878 | 26,79,63,150 | 0 | 31,47,60,600 |
| ಕೆಎಸ್‌ಆರ್‌ಟಿಸಿ ಬಸ್ ಪಾಸ್ | 0 | 40,00,000 | 0 | 6,87,83,200 |
| ಶಿಶು ಪಾಲನಾ ಕೇಂದ್ರಗಳು | | 1,08,843 | 0 | 3,11,61,282 |
| ತಾಯಿ ಮಗು ಸಹಾಯ ಹಸ್ತ ಯೋಜನೆ | 1,880 | 1,12,80,000 | 280 | 17,22,000 |
| ಪ್ರಿವೆಂಟಿವ್ ಹೆಲ್ತ್‌ಕೇರ್ ಯೋಜನೆ | 8,61,183 | 2,48,78,36,410 | 2,76,922 | 1,71,34,02,143 |
| ಸಂಚಾರಿ ಆರೋಗ್ಯ ಕ್ಲಿನಿಕ್ ಯೋಜನೆ | 2,97,531 | 13,84,94,846 | 3,36,045 | 91,35,90,140 |
| ತಾತ್ಕಾಲಿಕ ವಸತಿ ಸಮುಚ್ಚಯ ಯೋಜನೆ | 0 | 76,06,89,314 | 5500 | 87,59,18,893 |
| ನ್ಯೂಟ್ರೀಶನ್ ಕಿಟ್ | 0 | 0 | 2,86,000 | 73,59,91,567 |
| ಪಿ.ಯು.ಸಿ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಕಾರ್ಮಿಕರ ಮಕ್ಕಳಿಗೆ ಲ್ಯಾಪ್‌ಟಾಪ್ ಯೊಜನೆ | 7,000 | 49,93,29,032 | 0 | 44,80,000 |
| ಶಾಲಾ ಕಿಟ್ | 58,000 | 47,03,82,113 | 10,000 | 93,23,000 |
| **ಒಟ್ಟು** | **19,77,400** | **9,67,04,53,237** | **15,28,120** | **10,67,15,36,801** |

# ಅನುಬಂಧ-2

## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎನ್ ರವಿಕುಮಾರ್ ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1643 (1469)

| ನೋಂದಾಣಿಯಾಗಿರುವ ಕಾರ್ಮಿಕರ ಜಿಲ್ಲಾವಾರು ವಿವರ | | |
|---|---|---|
| ಕ್ರ.ಸಂ | ಜಿಲ್ಲೆಯಹೆಸರು | ಕಾರ್ಮಿಕರಸಂಖ್ಯೆ |
| 1 | ಬಾಗಲಕೋಟೆ | 112553 |
| 2 | ಬೆಂಗಳೂರುಗ್ರಾಮಾಂತರ | 21462 |
| 3 | ಬೆಂಗಳೂರುನಗರ | 337089 |
| 4 | ಬೆಳಗಾವಿ | 162109 |
| 5 | ಬಳ್ಳಾರಿ | 34861 |
| 6 | ಬೀದರ್ | 131388 |
| 7 | ಬಿಜಾಪುರ | 90268 |
| 8 | ಚಾಮರಾಜನಗರ | 36023 |
| 9 | ಚಿಕ್ಕಬಳ್ಳಾಪುರ | 41547 |
| 10 | ಚಿಕ್ಕಮಗಳೂರು | 67294 |
| 11 | ಚಿತ್ರದುರ್ಗ | 88462 |
| 12 | ದಕ್ಷಿಣಕನ್ನಡ | 62742 |
| 13 | ದಾವಣಗೆರೆ | 122015 |
| 14 | ಧಾರವಾಡ | 125158 |
| 15 | ಗದಗ | 73256 |
| 16 | ಗುಲಬರ್ಗಾ | 146175 |
| 17 | ಹಾಸನ | 64421 |
| 18 | ಹಾವೇರಿ | 88468 |
| 19 | ಕೊಡಗು | 6553 |
| 20 | ಕೋಲಾರ | 82232 |
| 21 | ಕೊಪ್ಪಳ | 151792 |
| 22 | ಮಂಡ್ಯ | 30399 |
| 23 | ಮೈಸೂರು | 119263 |
| 24 | ರಾಯಚೂರು | 65036 |
| 25 | ರಾಮನಗರ | 37586 |
| 26 | ಶಿವಮೊಗ್ಗ | 62465 |
| 27 | ತುಮಕೂರು | 89300 |
| 28 | ಉಡುಪಿ | 40854 |
| 29 | ಉತ್ತರಕನ್ನಡ | 119812 |
| 30 | ವಿಜಯನಗರ | 45470 |
| 31 | ಯಾದಗಿರಿ | 79649 |
| | **ಒಟ್ಟು** | **2735702** |

# ಅನುಬಂಧ-3

## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎನ್ ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ: 1643 (1469)

**ಮಂಡಳಿಯ ವತಿಯಿಂದ ಫಲಾನುಭವಿಗಳಿಗೆ ಮತ್ತು ಅವರ ಅವಲಂಭಿತರಿಗೆ ಅನುಷ್ಠಾನಗೊಳಿಸುತ್ತಿರುವ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳ ವಿವರ**

1. **ಪಿಂಚಣಿ ಸೌಲಭ್ಯ:** ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆ ಮಾಸಿಕ ರೂ.3,000/-
2. **ಕುಟುಂಬ ಪಿಂಚಣಿ ಸೌಲಭ್ಯ:** ಮೃತ ಪಿಂಚಣಿದಾರರ ಪತಿ/ಪತ್ನಿಗೆ ಮಾಸಿಕ **ರೂ.1500/-**
3. **ದುರ್ಬಲತೆ ಪಿಂಚಣಿ:** ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾ ಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ /ಭಾಗಶಃ ಅಂಗ ವಿಕಲತೆ ಹೊಂದಿದ್ದರೆ ಮಾಸಿಕ **ರೂ.2,000/-** ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ **ರೂ.2,00,000/-** ದವರೆಗೆ ಅನುಗ್ರಹರಾಶಿ ಸಹಾಯಧನ.
4. **ಕನ್ನಡಕ, ಶ್ರವಣಯಂತ್ರ, ಕೃತಕ ಕೈಕಾಲು ಮತ್ತು ಗಾಲಿ ಕುರ್ಚಿ** ಮರುಪಾವತಿ ಸೌಲಭ್ಯ (ಈ ಯೋಜನೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ).
5. **ಟ್ರೈನಿಂಗ್ – ಕಮ್ - ಟೂಲ್ ಕಿಟ್ಸ್ ಸೌಲಭ್ಯ (ಶ್ರಮ ಸಾಮರ್ಥ್ಯ): ರೂ.20,000/- ವರೆಗೆ.**
6. **ವಸತಿ ಸೌಲಭ್ಯ (ಕಾರ್ಮಿಕ ಗೃಹಭಾಗ್ಯ): ರೂ.2,00,000/-** ದವರೆಗೆ ಮುಂಗಡ ಸೌಲಭ್ಯ
7. **ಟ್ರೈನಿಂಗ್-ಕಮ್-ಟೂಲ್‌ಕಿಟ್ಸ್ ಸೌಲಭ್ಯ (ಶ್ರಮ ಸಾಮರ್ಥ್ಯ): ರೂ.20,000/- ವರೆಗೆ.**
8. **ವಸತಿ ಸೌಲಭ್ಯ (ಕಾರ್ಮಿಕ ಗೃಹಭಾಗ್ಯ): ರೂ.2,00,000/-** ದವರೆಗೆ ಮುಂಗಡ ಸೌಲಭ್ಯ.
9. **ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀಬಾಂಡ್):** ಮಹಿಳಾ ಫಲಾನುಭವಿಯ ಮೊದಲ ಎರಡು ಮಗುವಿನ ಜನನಕ್ಕೆ ರೂ.50,000/-.
10. **ಅಂತ್ಯಕ್ರಿಯೆ ವೆಚ್ಚ: ರೂ.4,000/-** ಹಾಗೂ ಅನುಗ್ರಹ ರಾಶಿ **ರೂ.1,46,000/-** ಸಹಾಯಧನ.

| ಕ್ರ. ಸಂ. | ಕೋರ್ಸ್/ತರಗತಿ | ತರಗತಿ/ಪದವಿ (ಪ್ರತಿ ವರ್ಷಕ್ಕೆ) (ರೂ.ಗಳಲ್ಲಿ) | ಸ್ನಾತಕೋತ್ತರ ಪದವಿ (ಪ್ರತಿ ವರ್ಷಕ್ಕೆ) (ರೂ.ಗಳಲ್ಲಿ) |
|---|---|---|---|
| 1 | 1ನೇ ತರಗತಿಯಿಂದ 5ನೇ ತರಗತಿ | 1,800/- | - |
| 2 | 6ನೇ ತರಗತಿಯಿಂದ 8ನೇ ತರಗತಿ | 2,400/- | - |
| 3 | 9 ಮತ್ತು 10ನೇ ತರಗತಿ | 3,000/- | - |
| 4 | ಪಿಯುಸಿ, 11 ಹಾಗೂ 12ನೇ ತರಗತಿ ಅಥವಾ ತತ್ಸಮಾನ ಕೋರ್ಸ್. | 6,000/- | - |
| 5 | 10ನೇ ತರಗತಿ ನಂತರದ ಐಟಿಐ/ ತತ್ಸಮಾನ ತಾಂತ್ರಿಕ ಕೋರ್ಸ್‌ಗಳು | 10,000/- | - |
| 6 | ಪಿಯುಸಿ ನಂತರದ ಯಾವುದೇ ಡಿಪ್ಲೋಮ ತರಗತಿ. | 12,000/- | - |
| 7 | ಸಾಮಾನ್ಯ ಪದವಿ (ಜನರಲ್ ಡಿಗ್ರಿ) - ಬಿಎ, ಬಿಕಾಂ, ಬಿಎಸ್ಸಿ ಮುಂತಾದವಗಳು | 15,000/- | 20,000/- |
| 8 | 03 ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ **Vocational** ವೃತ್ತಿಪರ ಕೋರ್ಸ್‌ಗಳು ಕಾನೂನು ಪದವಿ ಸಹಿತ (Professional Courses) | 20,000/- | 25,000/- |
| 9 | ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ತಾಂತ್ರಿಕ ವೃತ್ತಿಪರ ಕೋರ್ಸ್‌ಗಳು (Professional Courses) | 25,000/- | 35,000/- |
| 10 | 03 ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ಅರೆ ವೈದ್ಯಕೀಯ ವೃತ್ತಿಪರ ಕೋರ್ಸ್‌ಗಳು (Para Medical Courses) | 20,000/- | 25,000/- |

| | | | |
|---|---|---|---|
| **11** | 03 ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ವೈದ್ಯಕೀಯ ವೃತ್ತಿಪರ ಕೋರ್ಸ್‌ಗಳು (Professional Courses) | **25,000/-** | **35,000/-** |
| **12** | ರಾಷ್ಟ್ರೀಯ ಕಾನೂನು ಶಾಲೆಗಳಿಗೆ ಸಮನಾದ ಕಾನೂನು ವಿದ್ಯಾ ಸಂಸ್ಥೆಗಳು | **40,000/-** | **50,000/-** |
| **13** | ಪಿಹೆಚ್‌ಡಿ/ಎಂಫಿಲ್ (03 ವರ್ಷ ಅವಧಿಯವರೆಗೆ) | **40,000/-** | - |
| **14** | IIT, IIIT, AIMS, IISc, IISERC ನಂತಹ ಪ್ರತಿಷ್ಠಿತ ರಾಷ್ಟ್ರೀಯ ವಿದ್ಯಾಸಂಸ್ಥೆಗಳು. | **50,000/-** | **60,000/-** |

11. **ವೈದ್ಯಕೀಯ ಸಹಾಯ ಧನ (ಕಾರ್ಮಿಕ ಆರೋಗ್ಯ ಭಾಗ್ಯ):** ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಭಿತರಿಗೆ **ರೂ. 300/- ರಿಂದ ರೂ. 20,000/- ವರೆಗೆ.**
12. **ಅಪಘಾತ ಪರಿಹಾರ:** ನೊಂದಾಯಿತ ಕಟ್ಟಡ ಕಾರ್ಮಿಕರು ಕೆಲಸದ ಸ್ಥಳದಲ್ಲಿ **ಮರಣ** ಹೊಂದಿದ್ದಲ್ಲಿ **ರೂ.8,00,000/- ಹಾಗೂ** ಸಂಪೂರ್ಣ ಶಾಶ್ವತ ದುರ್ಬಲತೆಯಾದಲ್ಲಿ **ರೂ. 2,00,000/-.**
13. **ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕ ಚಿಕಿತ್ಸಾ ಭಾಗ್ಯ)**: ಹೃದ್ರೋಗ, ಕಿಡ್ನಿ ಜೋಡಣೆ, ಕ್ಯಾನ್ಸರ್ ಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದ ತೊಂದರೆಗೆ ಸಂಬಂಧಿತ ಚಿಕಿತ್ಸೆ, ಮೂತ್ರಪಿಂಡದಲ್ಲಿನ ಕಲ್ಲುತೆಗೆಯುವ ಚಿಕಿತ್ಸೆ, ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್ ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿಶಸ್ತ್ರ ಚಿಕಿತ್ಸೆ, ಇ.ಎನ್.ಟಿ ಚಿಕಿತ್ಸೆ, ಶಸ್ತ್ರ ಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕುಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರ ಚಿಕಿತ್ಸೆ, ವ್ಯಾಸ್ಕುಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರ ಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆಮುರಿತ/ ಡಿಸ್‌ಲೊಕೇಶನ್ ಚಿಕಿತ್ಸೆ, ಇತರೆ ಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ **ರೂ.2,00,000/-ವರೆಗೆ.**
14. **ಮದುವೆ ಸಹಾಯ ಧನ (ಗೃಹ ಲಕ್ಷ್ಮೀ ಬಾಂಡ್):** ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳ ಮದುವೆಗೆ **ತಲಾ ರೂ. 60,000/-.**
15. **ತಾಯಿ ಮಗು ಸಹಾಯ ಹಸ್ತ:** ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿ ಆಕೆಯ ಮಗುವಿನ ಶಾಲಾ ಪೂರ್ವಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕ **ರೂ.6,000/- ಗಳ** ಸಹಾಯಧನ.